ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.
ಸಿಸಿ ನಂಬರ್ **06/2024**

ಫಿರ್ಯಾದಿ ಸರಕಾರ (ಹಾವೇರಿ ಮಹಿಳಾ ಪೊಲೀಸ ಠಾಣೆ).

ವಿರುದ್ಧ

ಆರೋಪಿತರು:

**1.** ಮಲ್ಲಿಕಾರ್ಜುನ ತಂದೆ ಚನ್ನಬಸಪ್ಪ ವರ್ದಿ
ವಯಾ: **26** ವರ್ಷ, ಉದ್ಯೋಗ: ಕೃಷಿ
ಸಾ: ಕುಳೇನೂರ ತಾ:ಜಿ: ಹಾವೇರಿ

**2.** ಚನ್ನಬಸಪ್ಪ ತಂದೆ ಗದಿಗೆಪ್ಪ ವರ್ದಿ
ವಯಾ: **65** ವರ್ಷ, ಉದ್ಯೋಗ: ಕೃಷಿ
ಸಾ: ಕುಳೇನೂರ ತಾ:ಜಿ: ಹಾವೇರಿ

**3.** ನೀಲವ್ವ ತಂದೆ ಚನ್ನಬಸಪ್ಪ ವರ್ದಿ
ವಯಾ: **60** ವರ್ಷ, ಉದ್ಯೋಗ: ಗೃಹಿಣಿ
ಸಾ: ಕುಳೇನೂರ ತಾ:ಜಿ: ಹಾವೇರಿ

**:ದೋಷಾರೋಪಣೆ:**

ಇದರಲ್ಲಿ ಶ್ರೀ ಮಹಮ್ಮದ ಅನ್ವರ ಹುಸೇನ ಮೊಗಲಾನಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ದಿನಾಂಕ: 11.02.2022 ರಂದು 1 ನೇ ಆರೋಪಿಯಾದ ನೀನು ಚಾ.ಸಾ-1 ರವರೊಂದಿಗೆ ಶಾಸ್ತ್ರೋಕ್ತವಾಗಿ ಮದುವೆಯಾಗಿದ್ದು, ಮದುವೆ ಕಾಲಕ್ಕೆ ಚಾ.ಸಾ-1 ರವರ ಮನೆಯವರು ವರದಕ್ಷಿಣೆ ಅಂತಾ ನಗದು ಹಣ 1,25,000/-ರೂಪಾಯಿ ಹಾಗೂ 75 ಗ್ರಾಂ ಬಂಗಾರ, ರೂ.50,000/- ಬೆಳ್ಳಿ ಸಾಮಾನು, ರೂ 60,000/- ಕಿಮ್ಮತ್ತಿನ ಬಾಂಡೆ ಸಾಮಾನು ಕೊಟ್ಟು ಆರೋಪಿತರಾದ ನಿಮ್ಮ ಮನೆಯ ಮುಂದೆ ಮದುವೆ ಮಾಡಿ ಕೊಟ್ಟಿದ್ದು, ನಂತರ ಹಾವೇರಿ ಮಹಿಳಾ ಪೊಲೀಸ ಠಾಣಾ ವ್ಯಾಪ್ತಿಯ ಕುಳೇನೂರ ಗ್ರಾಮದ ನಿಮ್ಮ ಮನೆಗೆ ಆರೋಪಿತರಾದ ನೀವು ಚಾ.ಸಾ-1 ರವರನ್ನು ಕರೆದುಕೊಂಡು ಹೋಗಿ ಮೊದಲು ಮೂರು ತಿಂಗಳು ಚಾ.ಸಾ-1 ರವರನ್ನು ಚೆನ್ನಾಗಿ ನೋಡಿಕೊಂಡು, ನಂತರ ನಿನಗ ಸರಿಯಾಗಿ ಅಡುಗ ಮಾಡಾಕ

ಬರಂಗಿಲ್ಲ, ನಿಮ್ಮನ್ಯಾಗ ನಿನಗ ಹಿಂಗ ಕೆಲಸಾ ಕಲಸ್ಯಾರೇನು ಅಂತಾ ಚಾ.ಸಾ-1 ರವರೊಂದಿಗೆ ವಿನಾಕಾರಣ ಗಲಾಟೆ ಮಾಡಿ, ಪಿರ್ಯಾದಿಗೆ ನಿನ್ನ ತವರುಮನೆಯಿಂದ ಇನ್ನೂ ಎರಡು ಲಕ್ಷ ರೂಪಾಯಿ ವರದಕ್ಷಿಣೆ ಮತ್ತು ಹೊಸ ಮೋಟಾರ ಸೈಕಲ್ ತೆಗೆದುಕೊಂಡು ಬಾ ಎಂದು ದಿನಾಲೂ ಪಿರ್ಯಾದಿಗೆ ಹಲ್ಲೆ ಮಾಡಿ, ಜಗಳ ಮಾಡಿ, ದೈಹಿಕವಾಗಿ ಹಾಗೂ ಮಾನಸಿಕ ಕಿರುಕುಳ ನೀಡಿ, ದಿನಾಂಕಃ 18.10.2022 ರಂದು ಆರೋಪಿತರಾದ ನೀವು ಚಾ..ಾ-1 ರವರಿಗೆ ಹೊಲಮನಿ ಕೆಲಸದಿಂದ ಮರಳಿ ಮನೆಗೆ ಬಂದು, ಪಿರ್ಯಾದಿಗೆ ಸಂಜೆಯಾದರೂ ಕಸ ಹೊಡೆದು ದೀಪ ಹಚ್ಚಿಲ್ಲ ಅಂತಾ ಬೈಯ್ದಾಡಿ ಮನೆಯಲ್ಲಿದ್ದ ಹೊಲಕ್ಕ ಹೊಡೆಯುವ ವಿಷದ ಬಾಟಲಿಯನ್ನು ತೋರಿಸಿ ನೀನು ವಿಷ ಕುಡಿದು ಸಾಯಿ ಅಂತಾ ಒತ್ತಾಯ ಮಾಡಿ, ಕೌಟುಂಬಿಕ ಕಿರುಕುಳ ನೀಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ**.498(ಎ)** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಎರಡನೇಯದಾಗಿ **1** ನೇ ಆರೋಪಿತನಾದ ನೀನು ಹಾವೇರಿಯ ಕೌಟುಂಬಿಕ ನ್ಯಾಯಾಲಯದ ಆದೇಶದ ಪ್ರಕಾರ ಚಾ**.**ಸಾ**-1** ರವರೊಂದಿಗೆ ರಾಜಿ ಮಾಡಿಕೊಂಡು ನಿಮ್ಮ ಮನೆಗೆ ಕರೆದುಕೊಂಡು ಹೋಗಿದ್ದು**,** ನಂತರ ದಿನಾಂಕಃ **07.08.2023** ರದು ಮಧ್ಯಾಹ್ನ **2-00** ಘಂಟೆಗೆ ಚಾ**.**ಸಾ**-1** ರವರು ಮನೆಯಲ್ಲಿ ಸುಸ್ತಾಗಿ ಕುಳಿತುಕೊಂಡಿದ್ದಾಗ **2** ಮತ್ತು **3** ನೇ ಆರೋಪಿತರಾದ ನೀವು ಚಾ**.**ಸಾ**-1** ರವರಿಗೆ ಕೌಟುಂಬಿಕ ಕಿರುಕುಳ ನೀಡಿ**,** ಚಾ**.**ಸಾ**-1** ರವರಿಗೆ ಕೈಯಿಂದ ಹೊಡೆಬಡಿ ಮಾಡಿದ್ದು**,** ಅಲ್ಲದೇ ದಿನಾಂಕ **08.08.2023** ರಂದು **1** ನೇ ಆರೋಪಿಯಾದ ನೀನು ಚಾ**.**ಸಾ**-1** ರವರಿಗೆ ಕೈಯಿಂದ ಮೈ**,** ಕೈಗೆ ಹೊಡೆದಿದ್ದು**,** ಕಾಲಿನಿಂದ ಒದ್ದಿದ್ದು**,** ಕಾರಣ ಭಾರತೀಯ ದಂಡ ಸಂಹಿತೆ ಕಲಂ**.323** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತರಾದ ನೀವು ಚಾ.ಸಾ-1 ರವರಿಗೆ ಕೌಟುಂಬಿಕ ಕಿರುಕುಳ ನೀಡಿ, ಹಾದರಗಿತ್ತಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ**. 504** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕಃ 11.02.2022 ರಂದು 1 ನೇ ಆರೋಪಿಯಾದ ನೀನು ಚಾ.ಸಾ-1 ರವರೊಂದಿಗೆ ಶಾಸ್ರೋಕ್ತವಾಗಿ ಮದುವೆಯಾಗಿದ್ದು, ಮದುವೆ ಕಾಲಕ್ಕೆ ಚಾ.ಸಾ-1 ರವರ ಮನೆಯವರು ವರದಕ್ಷಿಣೆ ಅಂತಾ ನಗದು ಹಣ 1,25,000/- ರೂಪಾಯಿ ಹಾಗೂ 75 ಗ್ರಾಂ ಬಂಗಾರ, 50 ಸಾವಿರ ರೂಪಾಯಿ ಬೆಳ್ಳಿ ಸಾಮಾನು ಮತ್ತು ರೂ.60,000/- ಬಾಂಡೆ ಸಾಮಾನುಗಳನ್ನು ವರದಕ್ಷಿಣೆಯಾಗಿ ಪಡೆದುಕೊಂಡಿದ್ದು, ಕಾರಣ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ.**3** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಐದನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಚಾ.ಸಾ-1 ರವರೊಂದಿಗೆ ವಾಸವಿರುವ ಆರೋಪಿತರಾದ ನೀವು ಚಾ.ಸಾ-1 ರವರಿಗೆ ಹೆಚ್ಚಿನ ವರದಕ್ಷಿಣೆಯಾಗಿ ನಿನ್ನ ತವರುಮನೆಯಿಂದ ಎರಡು ಲಕ್ಷ ರೂಪಾಯಿ ಮತ್ತು ಒಂದು ಮೋಟಾರ ಸೈಕಲ್‌ನ್ನು ತೆಗೆದುಕೊಂಡು ಬಾ ಎಂದು ಬೇಡಿಕೆ ಇಟ್ಟಿದ್ದು, ಕಾರಣ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ.**4** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೇಲೆ ಹೇಳಿದ ದೋಷಾರೋಪಣೆ ಮೇಲೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಿರುತ್ತೀರಿ ಎಂದು ನಿರ್ದೇಶಿಸಿದ್ದೇನೆ.

ಹಾವೇರಿ.
ದಿಃ 01.07.2025

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>
<u>ಸಿಸಿ ನಂಬರ್ **6/2024**</u>
<u>ದಿನಾಂಕಃ **01.07.2025**</u>

<u>ಫಿರ್ಯಾದಿ</u> ಸರಕಾರ **(**ಹಾವೇರಿ ಮಹಿಳಾ ಪೊಲೀಸ ಠಾಣೆ**).**

ವಿರುದ್ದ

<u>ಆರೋಪಿ</u> **1.** ಮಲ್ಲಿಕಾರ್ಜುನ ತಂದೆ ಚನ್ನಬಸಪ್ಪ ವರ್ದಿ
ವಯಾಃ **26** ವರ್ಷ**,** ಉದ್ಯೋಗಃ ಕೃಷಿ
ಸಾಃ ಕುಳೇನೂರ ತಾಃಜಿಃ ಹಾವೇರಿ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(*ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು*)*

*(*ಮಹಮ್ಮದ ಅನ್ವರ ಹುಸೇನ ಮೊಗಲಾನಿ*)*
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

*1* ನೇ ಆರೋಪಿಯ ಸಹಿಃ

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.
ಸಿಸಿ ನಂಬರ್ **6/2024**
ದಿನಾಂಕಃ **01.07.2025**

ಫಿರ್ಯಾದಿ ಸರಕಾರ (ಹಾವೇರಿ ಮಹಿಳಾ ಪೊಲೀಸ ಠಾಣೆ).

ವಿರುದ್ದ

ಆರೋಪಿ **2.** ಚನ್ನಬಸಪ್ಪ ತಂದೆ ಗದಿಗೆಪ್ಪ ವರ್ದಿ
ವಯಾಃ **65** ವರ್ಷ, ಉದ್ಯೋಗಃ ಕೃಷಿ
ಸಾಃ ಕುಳೇನೂರ ತಾಃಜಿಃ ಹಾವೇರಿ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

2 ನೇ ಆರೋಪಿಯ ಸಹಿಃ

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**
ಸಿಸಿ ನಂಬರ್ **6/2024**
ದಿನಾಂಕಃ **01.07.2025**

ಫಿರ್ಯಾದಿ ಸರಕಾರ (ಹಾವೇರಿ ಮಹಿಳಾ ಪೊಲೀಸ ಠಾಣೆ).

ವಿರುದ್ಧ

ಆರೋಪಿ **3.** ನೀಲವ್ವ ತಂದೆ ಚನ್ನಬಸಪ್ಪ ವರ್ದಿ
ವಯಾಃ **60** ವರ್ಷ, ಉದ್ಯೋಗಃ ಗೃಹಿಣಿ
ಸಾಃ ಕುಳೇನೂರ ತಾಃಜಿಃ ಹಾವೇರಿ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

3 ನೇ ಆರೋಪಿಯ ಸಹಿಃ